ದಿನಾಂಕಃ **25.11.2024** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದದ ಪಾಟೀ ಸವಾಲುಃ ವಾದಿ ಪರ ಮಾನ್ಯ ಶ್ರೀ.**MN** ವಕೀಲರಿಂದಃ

ವಿಭಾಗ ಪತ್ರದ ಪ್ರಕಾರ ಯಾವ ಸರ್ವೆ ನಂಬರ್ ನಲ್ಲಿ ಎಷ್ಟು ಬಂದಿದೆ ಎಂದು ತಿಳಿದಿದೆ ಆದರೆ ಒಟ್ಟು ಎಷ್ಟು ಬಂದಿದೆ ಎಂದು ಲೆಕ್ಕ ಮಾಡಿ ಹೇಳಬೇಕು. ಯಾರು ಯಾರಿಗೆ ಯಾವ ಯಾವ ಕಡೆ ಯಾವ ಸರ್ವೆ ನಂಬರ್ ಬಂದಿದೆ ಎಂದು ಹೇಳಲು ಆಗುವುದಿಲ್ಲ. ದಾವಾ ಎ ಐಟಂ ನಂಬರ್ **1, 2** ಗಳಲ್ಲಿ ವಾದಿಗಳಿಗೆ ಯಾವುದೇ ಭಾಗ ಇರುವುದಿಲ್ಲ. ದಾವಾ ಐಟಂ ನಂಬರ್ **3** ಕೇವಲ ನಮಗೆ ಭಾಗ ಬಂದಿರುತ್ತದೆ. ದಾವಾ ಐಟಂ ನಂಬರ್ **4** ದೊಡ್ಡಯ್ಯ ರವರ ಪಾಲಿಗೆ ಹೋಗಿರುತ್ತದೆ. ದಾವಾ ಬಿ ಐಟಂ ನಂ.**7** ಚಿಕ್ಕ ಕರಿಯಪ್ಪ ರವರ ಪಾಲಿಗೆ ಹೋಗಿರುತ್ತದೆ. ದಾವಾ ಬಿ ಐಟಂ ನಂ.**6** ಚಿಕ್ಕ ಕರಿಯಪ್ಪ ಮತ್ತು ನರಸಿಂಹಪ್ಪ ರವರ ಪಾಲಿಗೆ ಹೋಗಿರುತ್ತದೆ. ದಾವಾ ಬಿ ಐಟಂ ನಂ.**5** ಚಿಕ್ಕ ಕರಿಯಪ್ಪ ರವರ ಪಾಲಿಗೆ ಹೋಗಿರುತ್ತದೆ. ದಾವಾ ಬಿ ಐಟಂ ನಂ.**9** ನ್ನು ನಾವು ಖರೀದಿ ಮಾಡಿರುತ್ತೇವೆ. ಸರ್ವೆ ನಂ. **160** ವಾದಿಗಳು ಖರೀದಿ ಮಾಡಿರುವ ಜಮೀನು ಆಗಿರುತ್ತದೆ.

ಪಾಲುಪಾರಿಕತ್ತಿನಂತೆ ಯಾರು ನಡೆದುಕೊಂಡಿಲ್ಲ ಎಂದರೆ ಸರಿಯಲ್ಲ, ಅದರಂತೆಯೇ ಅನುಭವಿಸುತ್ತಿದ್ದೇವೆ. ಪಾಲುಪಾರಿಕತ್ತಿನಲ್ಲಿ ವಾದಿಗಳಿಗೆ ಸರ್ವೆ ನಂ. **85** ರಲ್ಲಿ **3** ಎಕರೆ **4** ಗುಂಟೆ, ಸರ್ವೆ ನಂ. **111/1** ಮತ್ತು **113** ರಲ್ಲಿ ಎಲ್ಲಾ ಆಸ್ತಿಯೂ ಅವರಿಗೆ ಹೋಗಿರುತ್ತದೆ. ಸರ್ವೆ ನಂ. **113** ರಲ್ಲಿ **23** ಎಕರೆ, ಸರ್ವೆ ನಂ. **111/1** ರಲ್ಲಿ **25** ಎಕರೆ ಗಳು ವಾದಿಗಳಿಗೆ ಹೋಗಿರುತ್ತವೆ. ಪಹಣಿ ವಾದಿಗಳ ಹೆಸರಿಗೆ ಬಂದಿರುತ್ತದೋ ಇಲ್ಲವೋ ನನಗೆ ಗೊತ್ತಿಲ್ಲ. ಈ ಬಗ್ಗೆ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-**41** ರಲ್ಲಿ ಹನುಮಂತರಾಯಪ್ಪ ಬಿನ್ ಕರಿಯಪ್ಪ ಎಂದು ನಮೂದಾಗಿದೆ. ಸರ್ವೆ ನಂ. **3/3** ನಮ್ಮ ಪಿತ್ರಾರ್ಜಿತ ಆಸ್ತಿ ಆಗಿದ್ದು, ಅದನ್ನು ಆಗಲೇ ಮಾರಾಟ ಮಾಡಿರುತ್ತಾರೆ. ಯಾವಾಗ

ಮಾರಾಟ ಮಾಡಿರುತ್ತಾರೆ ಎಂದು ನಿಖರವಾಗಿ ಗೊತ್ತಿಲ್ಲ. **1962** ನಂತರ ಮಾರಾಟ ಮಾಡಿರುತ್ತಾರೆ. ನಿಪಿ-**43** ರಲ್ಲಿ ನಾಗಮ್ಮ ಎಂಬ ಹೆಸರು ಕಾಣುತ್ತಿದೆ. ವಿಭಗ ಆಗದೇ ಇದ್ದರೂ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ.**111** ಮತ್ತು **113** ನಮ್ಮ ಕುಟುಂಬದ ಆಸ್ತಿಗಳಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖಾನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಅಧಿಕ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಪಾವಗಡ.

ಸಾಕ್ಷಿ ಸಹಿಃ